# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1528 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ. ಹರಿಪ್ರಸಾದ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-03-2021 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಬಹಳ ವರ್ಷಗಳ ಹಿಂದೆ, ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದ ತಿಪ್ಪಗೊಂಡನಹಳ್ಳಿ ಜಲಾಶಯದ ಪುನಶ್ಚೇತನದ ಬಗ್ಗೆ ಸರ್ಕಾರ ಯಾವುದಾದರೂ ಯೋಜನೆಯನ್ನು ರೂಪಿಸಿ ಕ್ರಮ ತೆಗೆದುಕೊಂಡಿದೆಯೇ: (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ:ನಅಇ 50 ಎಂಎನ್‌ಐ 2019, ದಿನಾಂಕ: 28.02.2019ರಂತೆ ತಿಪ್ಪಗೊಂಡನಹಳ್ಳಿ ಜಲಾಶಯ ಪುನಃಶ್ಚೇತನದ 1ನೇ ಹಂತದ ಕಾಮಗಾರಿ ಹಾಗೂ 10 ವರ್ಷಗಳ ಕಾರ್ಯ ಮತ್ತು ನಿರ್ವಹಣೆ ಒಳಗೊಂಡಿರುವ ಟೆಂಡರ್‌ನ ಕಾಮಗಾರಿಯು ಪ್ರಸ್ತುತ ಪ್ರಗತಿಯಲ್ಲಿರುತ್ತದೆ. ಬೆಂಗಳೂರು ಜಲಮಂಡಳಿಯಿಂದ ಸದರಿ ಕಾಮಗಾರಿಯನ್ನು ಮೆ॥ ಮೆಘಾ ಇಂಜಿನಿಯರಿಂಗ್ & ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ಟೆಂಡರ್ ಪ್ರೀಮಿಯಂ ಶೇ.12ರಷ್ಟು ರೂ.291.58 ಕೋಟಿಗಳಿಗೆ ನೀಡಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ 30 ತಿಂಗಳು (ಪ್ರಾರಂಭದ ದಿ: 06.03.2019 ರಿಂದ ಮುಕ್ತಾಯ ದಿ: 06.09.2021) (ಭೌತಿಕ ಪ್ರಗತಿ 51.5% ಮತ್ತು ಆರ್ಥಿಕ ಪ್ರಗತಿ 29% ಕಾಮಗಾರಿಯು ಪ್ರಗತಿಯಲ್ಲಿರುತ್ತದೆ).<br><br>ಬೆಂಗಳೂರು ಜಲಮಂಡಳಿಯಿಂದ ತಿಪ್ಪಗೊಂಡನಹಳ್ಳಿ ಪುನಃಶ್ಚೇತನ ಮೊದಲನೇ ಹಂತದ ಕಾಮಗಾರಿಯನ್ನು ಒಟ್ಟು ರೂ.315.03 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸದರಿ ಮೊತ್ತದ ಶೇಕಡ 50ರಷ್ಟು ಅಂದರೆ ರೂ.157.53 ಕೋಟಿಗಳನ್ನು KUIDFC ಯ, Megacity Revolving Funds (MCRF) Scheme ನಿಂದ ಪಡೆಯಲು ಹಾಗೂ ಸರ್ಕಾರದ ಅನುದಾನ ಶೇಕಡ 25ರಷ್ಟು ಅಂದರೆ ರೂ.78.50 ಕೋಟಿ ಹಾಗೂ ಉಳಿಕೆ ಶೇಕಡ 25ರಷ್ಟು ಅಂದರೆ ರೂ.78.75 ಕೋಟಿಗಳನ್ನು ಬೆಂಗಳೂರು ಜಲಮಂಡಳಿಯ ಸಂಪನ್ಮೂಲದಿಂದ ಭರಿಸಲಾಗುತ್ತದೆ. |
| 2 | ಜಲಾಶಯದ ಹೂಳನ್ನು ತೆಗೆದು, ಅರ್ಕಾವತಿ ನದಿಯನ್ನು ಪುನಶ್ಚೇತನ ಮಾಡಿ, ನದಿಗೆ ಹಾಗೂ ಜಲಾಶಯಕ್ಕೆ ಕೊಳಚೆ ನೀರು ಹರಿಯುವುದನ್ನು ತಡೆಗಟ್ಟಿ, ಮೊದಲಿನಂತೆ ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ನೀರನ್ನು ಸಂಗ್ರಹಿಸಿ, ಬೆಂಗಳೂರು ಮಹಾನಗರದ ಭಾಗಕ್ಕೆ ನೀರು ಸರಬರಾಜು ಮಾಡಲು ಕ್ರಮ ಜರುಗಿಸಲಾಗುವುದೇ? | ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆ ಅಡಿಯಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದ ಹೂಳೆತ್ತುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಅರ್ಕಾವತಿ ನದಿಯಿಂದ ಜಲಾಶಯಕ್ಕೆ ಹರಿಯುವ ಕೊಳಚೆ ನೀರನ್ನು ತಡೆಗಟ್ಟಲು ತಿಪ್ಪಗೊಂಡನಹಳ್ಳಿ ಜಲಾಶಯದ ಹತ್ತಿರ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು (STP) ನಿರ್ಮಾಣ ಮಾಡಲಾಗುತ್ತಿದೆ. ತಿಪ್ಪಗೊಂಡನಹಳ್ಳಿ ಜಲಾಶಯ ಪುನಃಶ್ಚೇತನದ 1ನೇ ಹಂತದ ಕಾಮಗಾರಿ ಪೂರ್ಣಗೊಂಡ ನಂತರ ಎತ್ತಿನಹೊಳೆ ಯೋಜನೆಯಿಂದ 1.7 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು, ಸದರಿ ಎತ್ತಿನಹೊಳೆ ನೀರು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಸಿ ಶೇಖರಿಸಿದ ನಂತರ ಜಲಶುದ್ಧೀಕರಣಾ ಘಟಕದಲ್ಲಿ (WTP) ನೀರನ್ನು ಮತ್ತೊಮ್ಮೆ ಶುದ್ಧೀಕರಿಸಿ ಬೆಂಗಳೂರು ಮಹಾನಗರದ ಪಶ್ಚಿಮ ಭಾಗಕ್ಕೆ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿದೆ. |

**ಸಂಖ್ಯೆ: ನಅಇ 47 ಎಂಎನ್‌ಐ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ